ಕ್ಷಣ ಕ್ಷಣದ ಸುದ್ದಿಗಾಗಿ
ವಿಶ್ವವಾಣಿ timely ಆ್ಯಪ್ ಡೌನ್‌ಲೋಡ್ ಮಾಡಿ

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಸಿರಿಧಾನ್ಯಕ್ಕೆ ಪ್ರೋತ್ಸಾಹ ಹೆಚ್ಚಲಿ

ಮೊದಲಿನಿಂದಲೂ ನಮ್ಮ ಪೂರ್ವಜರ ಆಹಾರ ಪಟ್ಟಿಯಲ್ಲಿ ಸಿರಿಧಾನ್ಯಗಳು ಅಗ್ರಸ್ಥಾನ ಪಡೆದಿವೆ. ನಮ್ಮ ಹಿರಿಯರೂ ಆಹಾರದಲ್ಲಿ ಸಿರಿಧಾನ್ಯಗಳನ್ನು ಹೆಚ್ಚು ಹೆಚ್ಚು ಬಳಸುತ್ತಿದ್ದರು. ನವಣೆ, ಊದಲು, ಆರ್ಕ, ಸಾಮೆ, ಕೂರಲೆ, ರಾಗಿ, ಜೋಳ, ಸಜ್ಜೆಯಂತಹ ಸಿರಿಧಾನ್ಯಗಳು ಪೌಷ್ಟಿಕಾಂಶಗಳ ಕಣಜವೇ ಆಗಿವೆ. ಅತಿ ಕಡಿಮೆ ಮಳೆಯಲ್ಲೂ ಯಾವುದೇ ಗೊಬ್ಬರಗಳಿಲ್ಲದೆಯೂ ಬೆಳೆಯಬಹುದಾಗಿದ್ದು, 'ಬರಗಾಲದ ಮಿತ್ರ'ರು ಎನ್ನುತ್ತಾರೆ. ಮಧು ಮೇಹ ನಿಯಂತ್ರಕ್ಕೆ ಸಿರಿಧಾನ್ಯ ಸಹಕಾರಿ. ಆದರೆ, ಇದರ ಬಳಕೆ ಇತ್ತೀಚೆಗೆ ಕಡಿಮೆಯಾಗುತ್ತಿದೆ. ಆಧುನಿಕ ಕೃಷಿ ಪದ್ಧತಿಯ ಹೆಸರಿನಲ್ಲಿ ಬರೀ 'ವಾಣಿಜ್ಯ ಬೆಳೆ'ಗಳೇ ಮಹತ್ವ ಪಡೆಯುತ್ತಿರುವ ಈ ದಿನಗಳಲ್ಲಿ ಸಾಂಪ್ರದಾಯಿಕ ಬೆಳೆಗಳಾದ ಸಿರಿಧಾನ್ಯಗಳತ್ತ ರೈತರ ಚಿತ್ತ ಕಡಿಮೆಯಾಗುತ್ತಿದೆ. ಮಾರುಕಟ್ಟೆಯಲ್ಲಿ ಸಿರಿಧಾನ್ಯಗಳಿಗೆ ಸ್ಪರ್ಧಾತ್ಮಕ ಬೆಲೆಯ ಖಾತ್ರಿಯಿದ್ದರೆ, ರೈತರು ಸಿರಿಧಾನ್ಯಗಳತ್ತ ಗಮನಿಸಬಹುದು. ಅದಕ್ಕೆ ಸೂಕ್ತ ಮಾರ್ಗದರ್ಶನ ಹಾಗೂ ಪ್ರೋತ್ಸಾಹದಾಯಕ ಯೋಜನೆಗಳು ಕೃಷಿ ಇಲಾಖೆ ರೂಪಿಸಬೇಕಿದೆ. ಆರೋಗ್ಯ ಸಮಾಜ ನಿರ್ಮಾಣಕ್ಕಾಗಿ ಸಾರ್ವಜನಿಕ ಪಡಿತರ ವ್ಯವಸ್ಥೆಯಲ್ಲಿ ಹಾಗೂ ಶಾಲಾ ಮಕ್ಕಳ ಮಧ್ಯಾಹ್ನದ ಬಿಸಿಯೂಟ ಯೋಜನೆಯಲ್ಲೂ ಇದರ ಬಳಕೆ ಕಡ್ಡಾಯವಾಗಬೇಕು.

-**ಪ್ರಶಾಂತ್ ಎಂ. ಕುನ್ನೂರ** ಕಲಬುರಗಿ

ಶಾಶ್ವತ ಪರಿಹಾರ ನೀಡಿ

ಚುನಾವಣೆಯ ಸಮಯದಲ್ಲಿ ಅಧಿಕಾರದ ಗದ್ದುಗೆ ಏರಲು ರಾಜಕೀಯ ಪಕ್ಷಗಳು ಜನರನ್ನು ಸೆಳೆಯಲು ಪ್ರಣಾಳಿಕೆಯಲ್ಲಿ ಹೊಸ ಯೋಜನೆಗಳನ್ನು ಪ್ರಕಟಿಸುತ್ತಾರೆ. ಅದರಲ್ಲೂ ರೈತರನ್ನು ಸೆಳೆಯಲು 'ಸಾಲಮನ್ನಾ' ಎಂಬ ತಂತ್ರ ಹರಿಬಿಡುತ್ತಾರೆ. ಏಕೆಂದರೆ ಸಾಲಮನ್ನಾದ ಹೆಸರಿನಲ್ಲಿ ರೈತರ ಅಷ್ಟಿಷ್ಟು ಸಾಲವನ್ನು ಮನ್ನಾ ಮಾಡಿದಾಗ ಸರಕಾರದಿಂದ ಇಷ್ಟಾದರೂ ನೆರವು ಬಂದಿತಲ್ಲ ಎಂದು ರೈತರು ಸುಲಭವಾಗಿ ಮರಳಾಗುತ್ತಾರೆಂಬ ಸಂಗತಿ ರಾಜಕಾರಣಿಗಳದ್ದು. ಆದರೆ ಸಾಲಮನ್ನಾ ಕ್ಷಣಿಕವಾಗಿ ರೈತರ ಸಂಕಟವನ್ನು ಪರಿಹರಿಸಬಹುದು. ಆದರೆ ಆತನ ಬದುಕು ಶಾಶ್ವತವಾಗಿ ಹಸನಾಗಿಸುವುದಿಲ್ಲ. ಈ ರೀತಿ ಸಾಲಮನ್ನಾ ಮಾಡುವ ಬದಲು ಆ ಹಣವನ್ನು ಕೆರೆಕಟ್ಟೆಗಳ ನಿರ್ಮಾಣಕ್ಕೆ, ಕೆರೆಗಳ ಹೂಳೆತ್ತಲು, ನೀರಾವರಿ ಕಾಲುವೆಗಳ ನಿರ್ಮಾಣಕ್ಕೆ , ಹಾಗೂ ಏತ ನೀರಾವರಿಯಂತಹ ಯೋಜನೆ ರೂಪಿಸಲು ಬಳಸಿದರೆ ರೈತರ ಬದುಕು ಬಂಗಾರವಾಗುತ್ತದೆ. ರೈತರಿಗೆ ನೀರಿಗಿಂತ ಮುಖ್ಯವಾದ ವಸ್ತು ಸಾಲಮನ್ನಾವೇ? ರೈತನ ಬೆಳೆಗೆ ಸಾಕಷ್ಟು ನೀರು ಸಿಕ್ಕಾಗ ಉತ್ತಮ ಫಸಲನ್ನು ಬೆಳೆಯುವ ಮೂಲಕ ಸ್ವಾವಲಂಬಿಗಳಾಗುತ್ತಾರೆ. ಇನ್ನಾದರೂ ರಾಜಕಾರಣಿಗಳು ಸಾಲಮನ್ನಾ ಎಂಬ ಕುತಂತ್ರವನ್ನು ಬಿಟ್ಟು ರೈತರಿಗೆ ಸಾಕಷ್ಟು ನೀರೊದಗಿಸುವ ಯೋಜನೆಗಳಿಗೆ ಆ ಹಣ ಬಳಸಲು ಮನಸ್ಸು ಮಾಡಬೇಕು.

-**ಶಿವಪುತ್ರ ಇಂಗಳೇಶ್ವರ** ಮುಳಸಾವಳಗಿ

ಅವಕಾಶವಾದಿ ಮೈತ್ರಿ

ಚುನಾವಣಾ ಸಮಯದಲ್ಲಿ ಆರೋಪ ಪ್ರತ್ಯಾರೋಪ ಮಾಡುತ್ತಾ ಪ್ರಚಾರ ಕೈಗೊಂಡು, ಪೂರ್ವ ಸಿದ್ಧತೆ ಇಲ್ಲದೆ, ಚುನಾಯಿತ ಶಾಸಕರ ಅಭಿಪ್ರಾಯ ತಿಳಿಯದೆ ಪಕ್ಷಗಳ ಮುಖಂಡರೇ ಅಧಿಕಾರ ಹಂಚಿಕೊಳ್ಳುವುದಕ್ಕಾಗಿ ತುರಾತುರಿ ಸಮ್ಮಿಶ್ರ ಸರಕಾರ ರಚಿಸಿದರೆ ರಾಜ್ಯದ ಆಡಳಿತ ಹೇಗೆ ಸ್ಥಗಿತವಾಗುತ್ತದೆ ಎನ್ನುವುದಕ್ಕೆ ಪ್ರಸ್ತುತ ಸನ್ನಿವೇಶಗಳೇ ಸಾಕ್ಷಿ. ಮಂತ್ರಿ ಮಂಡಲ ರಚಿಸಿದರೂ ಖಾತೆ ಹಂಚಲು ಸಾಧ್ಯವಾಗುತ್ತಿಲ್ಲ. ಅತೃಪ್ತ ಶಾಸಕರ ಮನೆಗೆ ನಾಯಕರು ಹೋಗಿ ಅವರನ್ನು ಸಮಾಧಾನ ಪಡಿಸುವ ಸ್ಥಿತಿ ವಿಷಾದಕರ. ಈಗಲಾದರೂ ಅಧಿಕಾರದ ಮೋಹ ತೊರೆದು ಜವಾಬ್ದಾರಿ ಅರಿತು ಸಿಕ್ಕ ಸ್ಥಾನಮಾನದಲ್ಲೇ ಶಾಸಕರು ಜನ ಸೇವೆ ಮಾಡಲಿ. ಆಗ ಮಾತ್ರ ಇಂತಹ ಚುನಾವಣೋತ್ತರ ಸಮ್ಮಿಶ್ರ ಸರಕಾರಕ್ಕೆ ಅನುಮತಿ ನೀಡಿದ ರಾಜ್ಯಪಾಲರಿಗೆ ಗೌರವ ಸಂದೀತು.

-**ಸತ್ಯಬೋಧ** ಬೆಂಗಳೂರು

ಭಟ್ಟರ್ ಸ್ನಾಕ್

- **ಗಜಾನನ ಹೆಬ್ಬಾರ, ಬೆಂಗಳೂರು**
ರಾಜ್ಯದೆಲ್ಲೆಡೆ ಮಳೆ ಸುರಿಯುತ್ತಿರುವುದು ಯಾವುದರ ಸಂಕೇತ?
-ಅಚ್ಛೇ ದಿನ್!

- **ಚಂದ್ರಕಾಂತ ಪಾಟೀಲ, ದಾವಣಗೆರೆ**
ಈ ಮಳೆ ನೋಡಿ ನಿಮಗೆ ಏನೂ ಅನಿಸುವುದಿಲ್ಲವಾ?
-ನನಗೊಂದೇ ಅನಿಸಿದರೆ ಏನೂ ಪ್ರಯೋಜನವಿಲ್ಲ!

- **ರಾಘವೇಂದ್ರ ಸೂರಟೂರು, ಶಿವಮೊಗ್ಗ**
ನೀವು ಫೇಸ್‌ಬುಕ್‌ನಲ್ಲಿ ಆ್ಯಕ್ಟಿವ್ ಆಗಿಲ್ಲವಲ್ಲ, ಕಾರಣವೇನು?
-ಎಲ್ಲರೂ ಇರುವಲ್ಲಿ ನಾನು ಇರೊಲ್ಲ!

- **ಗೋವಿಶೆಟ್ಟಿ ಸುಧಾಕರ, ಚಿಂತಾಮಣಿ**
ಆತ್ಮಹತ್ಯೆ ಮಾಡಿಕೊಳ್ಳುವವರ ಬಗ್ಗೆ ನೀವು ಏನು ಹೇಳ್ತೀರಿ?
-ಅದಕ್ಕಿಂತ ಮುಂಚೆ ಬಂದರೆ ಏನಾದರೂ ಹೇಳಬಹುದಪ್ಪ!

- **ಚೈತ್ರಾ, ಮಲ್ಲೇಶ್ವರ**
ಎದುರಮನೆಯ ಹುಡುಗನ ನೋಡದೇ ವಾರವಾಯ್ತು, ಏನು ಮಾಡಲಿ?
-ಯಾರಾದರೂ ವಾರಗಟ್ಟಲೆ ಒಬ್ಬನಿಗಾಗಿ ಕಾಯ್ತಾರಾ? ಮೇಲಿನ ಮನೆ ಹುಡುಗ ಸುಮ್ಮನೆ ಇದ್ದಾನಲ್ಲ!

- **ಮೀನಾಕ್ಷಿ ರಮೇಶ, ಮೈಸೂರು**
ಜೀವನದಲ್ಲಿ ಬಹಳ ನೊಂದಿದ್ದೇನೆ, ನಿಮ್ಮ ಸಾಂತ್ವನದ ನುಡಿ ಏನು?
-ಮಹೇಶ್ಚಂದ್ರ ಗುರು ಪಾಠ ಕೇಳು, ನೀನು ಅನುಭವಿಸುತ್ತಿರುವ ನೋವಿನಲ್ಲೇ ಸುಖವಿದೆ ಎಂದೆನಿಸಲಾರಂಭಿಸುತ್ತದೆ!

- **ವಸುಧಾ ನಾಯಕ ಗಿರಿನಗರ, ಹುಬ್ಬಳ್ಳಿ**
ಜಯಂತ ಕಾಯ್ಕಿಣಿಯವರ ಹಾಡು ಕೇಳಿದರೆ ಮೈ ಮನವೆಲ್ಲಾ ಪುಳಕಿತವಾಗುವುದು ಯಾಕೆ?
-ಪುಳಕವೆಲ್ಲ ಕೇವಲ ಹಾಡಿಗೆ ಮಾತ್ರ ಸೀಮಿತವಾಗುತ್ತದಲ್ಲ ಎಂಬ ವ್ಯಥೆ!

- **ಎಂ.ಬಿ.ಕೃಷ್ಣಮೂರ್ತಿ, ಚಾಮರಾಜನಗರ**
ತಮ್ಮ ಅಮೂಲ್ಯ ಮತವನ್ನು ಹಣಕ್ಕೆ, ಹೆಂಡಕ್ಕೆ ಮಾರಿಕೊಳ್ಳುವವರಿಗೆ ನಿಮ್ಮ ಹಿತವಚನ?
-ನಶೆಯಲ್ಲಿದ್ದವರಿಗೆ ಯಾವ ಹಿತವಚನ ಹೇಳಿ ಪ್ರಯೋಜನವಿಲ್ಲ!

- **ವಿ.ಹೇಮಂತಕುಮಾರ, ಬೆಂಗಳೂರು**
ಮದುವೆ ಆದವರೆಲ್ಲಾ ಹನಿಮೂನ್‌ಗೆ ಹೋಗಲೇಬೇಕಾ ಭಟ್ರೇ?
-ಹನಿಮೂನ್‌ಗೆ ಹೋಗಿ ಬಂದ ನಂತರವೂ ಮದುವೆಯಾಗಬಹುದು!

- **ಕಡೂರು ದೇವೇಂದ್ರ**
ನಾವು ಸಮಾಧಾನವಾಗಿಲ್ಲದೇ ಇನ್ನೊಬ್ಬರನ್ನು ಸಮಾಧಾನ ಮಾಡೋದು ಕಷ್ಟ ಅಲ್ವೇ?
-ನಮ್ಮ ಹೊಟ್ಟೆ ತುಂಬಿದ್ದರೆ ಮಾತ್ರ ಬೇರೆಯವರಿಗೆ ಹಸಿವಿನ ಬಗ್ಗೆ ಉಪದೇಶ ಕೊಡಬಹುದು!

ಜಪಾನ್‌ನಲ್ಲಿ ಹೊಸ ಬೇಗುದಿ, ತಾಯ್ತನಕ್ಕೂ ಬೇಕು ಸಂಸ್ಥೆ ಮಾಲೀಕನ ಒಪ್ಪಿಗೆ

ವಿದೇಶ

ವಿ.ಎನ್. ವೆಂಕಟಲಕ್ಷ್ಮಿ

editoped@vishwavani.news

ಮಹಿಳೆಯರಿಗೆ ಮನೆ ಹಾಗೂ ಉದ್ಯೋಗ ಎರಡನ್ನೂ ಸಂಭಾಳಿಸಿಕೊಂಡು ಹೋಗುವುದು ಕಷ್ಟ ಎಂಬ ಭಾವನೆ ನಮ್ಮಲ್ಲಿದೆ. ಅದು ಭಾವನೆಯಷ್ಟೇ ಅಲ್ಲ, ವಾಸ್ತವ ಕೂಡ. ಕಾರಣ ನಮ್ಮ ಸಮಾಜ ಹೆಣ್ಣು ಮನೆ ಹಾಗೂ ಮಕ್ಕಳನ್ನು ನೋಡಿಕೊಂಡಿರಲಿ ಸಾಕು. ಅವರೇಕೆ ದುಡಿಯಬೇಕು ಎಂಬ ಧೋರಣೆ ಹೊಂದಿದೆ. ಇಷ್ಟಾದರೂ ಹೆಣ್ಣು ಮಕ್ಕಳು ದುಡಿಯಬೇಕೆಂದರೆ ಅವರು ಎರಡನ್ನೂ ನಿಭಾಯಿಸಿಕೊಂಡು ಹೋಗಲೇಬೇಕೆಂದು ನಿರೀಕ್ಷಿಸುತ್ತಾರೆ. ಮಕ್ಕಳು, ಅಡುಗೆ, ಮನೆಯಲ್ಲಿ ಹಿರಿಯರಿದ್ದರೆ ಅವರ ಆರೈಕೆ, ಮನೆ ಕೆಲಸ ಇವಿಷ್ಟನ್ನು ಮುಗಿಸಿಯೇ ಆಕೆ ಉದ್ಯೋಗ ಮಾಡಬೇಕು. ಈ ವಿಚಾರದಲ್ಲಿ ಯಾವುದೇ ಹೊಂದಾಣಿಕೆಯಿಲ್ಲ. ಇಷ್ಟು ಮಾಡಲಾಗದಿದ್ದರೆ, ಕೆಲಸ ಬಿಡಬೇಕು. ಯಾರೂ ಆಕೆಯ ಬೆಂಬಲಕ್ಕೆ ನಿಲ್ಲುವುದಿಲ್ಲ. ಇದು ನಮ್ಮ ಸಮಾಜದ ಮನಸ್ಥಿತಿ. ಹೆಣ್ಣು ಬೇರೆ ಬೇರೆ ಕ್ಷೇತ್ರಗಳಲ್ಲಿ ಇಷ್ಟೆಲ್ಲ ಸಾಧಿಸಿದ ಮೇಲೂ ಈ ಮನೋಭಾವದಲ್ಲಿ ಏನೂ ಬದಲಾವಣೆ ಬಂದಿಲ್ಲ. ಇದು ನಮ್ಮ ದೇಶದ ಸ್ಥಿತಿಯಾದರೆ, ಜಪಾನಿನಲ್ಲಿ ಇದು ಇನ್ನೊಂದು ಅತಿರೇಕ ತಲುಪಿದೆ. ಅಲ್ಲಿನ ಉದ್ಯೋಗಸ್ಥ ಮಹಿಳೆಯರು ಬಯಸಿದಾಗ ಬಸುರಿಯಾಗುವ ಅವಕಾಶವೂ ಇಲ್ಲ. ಜಪಾನಿನಂಥ ಮುಂದುವರಿದ ದೇಶದಲ್ಲಿ ಹೀಗಾ ? ಹಾಗಾದರೆ ಏನು ನಡೆಯುತ್ತಿದೆ ಜಪಾನಿನಲ್ಲಿ?

ಸಯಾಕೋ ಎರಡನೇ ಮಗುವಿಗಾಗಿ ಕಳೆದ ಎರಡು ವರ್ಷದಿಂದ ಪ್ರಯತ್ನಿಸುತ್ತಿದ್ದಾಳೆ. ಆದರೆ 'ನಿಮ್ಮ ಸರದಿ ತಪ್ಪಿಸಿಕೊಂಡಿದ್ದೀರಿ.ಸದ್ಯ ಅದನ್ನು ಕೈಬಿಡುವುದು ಒಳ್ಳೆಯದು' ಎಂದು ಆಕೆ ಕೆಲಸಮಾಡುವ 'ಡೇ ಕೇರ್ ಸೆಂಟರ್'ನ ಮಾಲೀಕ ಸಲಹೆ ನೀಡುತ್ತಾನೆ. ಇದು ಸಯಾಕೋಗೆ ಆಘಾತದಂತೆ ಬಂದೆರಗುತ್ತದೆ. ತಮ್ಮಲ್ಲಿ ಕೆಲಸ ಮಾಡುವ ಉದ್ಯೋಗಸ್ಥ ಮಹಿಳೆಯರು 'ರೋಸ್ಟರ್' ಅನುಸರಿಸಿ ಸರದಿಯಲ್ಲಿ ಗರ್ಭಿಣಿಯರಾಗಬೇಕು, ಸರದಿ ಮೀರಿ ಮಗುವನ್ನು ಪಡೆಯಲು ಅವರು ಮುಂದಾದರೆ ಕಂಪನಿ ವಹಿವಾಟಿಗೆ ಧಕ್ಕೆ ಎಂದು ಯೋಚಿಸುವ ವ್ಯವಸ್ಥಾಪಕರು ಈ ಬಗೆಯ ನಿರ್ಬಂಧ ವಿಧಿಸುವುದು ಜಪಾನ್‌ನಲ್ಲಿ ಈಗ ಸಾಮಾನ್ಯವಾಗಿದೆ.

35 ವರ್ಷದ ಸಯಾಕೋಗೆ ತನ್ನ ಬಾಸ್ ಹೀಗೊಂದು ಅಲಿಖಿತ ನೀತಿ ಪಾಲಿಸುತ್ತಾನೆ ಎಂಬುದು ತಿಳಿದಾಗ ಆದ ಆಶ್ಚರ್ಯ, ಆಘಾತ ಅಷ್ಟಿಷ್ಟಲ್ಲ. 'ನಾನು ಸಂತಾನ ಪರಿಣತ ವೈದ್ಯರನ್ನು ಇದಕ್ಕಾಗಿ ಸಂಪರ್ಕಿಸುತ್ತಿದ್ದುದು ಅವರಿಗೆ ಗೊತ್ತಿತ್ತು.ಆದರೂ ಇಂತಹದೊಂದು ಸಲಹೆ ನೀಡುತ್ತಾರೆ ಎಂದರೆ' ಎಂದು ದಿಗ್ಭ್ರಮೆಗೊಂಡ ಆಕೆ ಆ ಕೆಲಸ ಬಿಟ್ಟು ಬೇರೆ ಕಡೆ ಸೇರಿಕೊಂಡರು; ಮಗುವನ್ನೂ ಪಡೆದರು.

ಆದರೆ ಗರ್ಭಿಣಿಯಾಗಲು 'ರೋಟಾ' ಪಾಲಿಸಬೇಕು' ಎಂಬ ವಿಷಯ ಇದೇ ವರ್ಷದ ಆರಂಭದಲ್ಲಿ ದೇಶದೆಲ್ಲೆಡೆ ತೀವ್ರ ಚರ್ಚೆಗೆ ಗ್ರಾಸವಾಗಿದ್ದು, ಸರದಿ ಉಲ್ಲಂಘಿಸಿ ಗರ್ಭಿಣಿಯಾಗಿದ್ದಕ್ಕೆ ತನ್ನ ಪತ್ನಿ ಅನುಭವಿಸಬೇಕಾದುದನ್ನು ಒಬ್ಬ ಪತಿ ಪತ್ರಿಕೆಯೊಂದರಲ್ಲಿ ಪ್ರಕಟಿಸಿದಾಗ. ನಾವಿಬ್ಬರೂ ಪತ್ನಿಯ ಮೇಲಧಿಕಾರಿಯನ್ನು ಕಂಡು ಹೀಗಾಗಿದ್ದಕ್ಕೆ ಕ್ಷಮಿಸಿ ಎಂದು ಮನವಿ ಮಾಡಿಕೊಂಡರೆ, 'ನನ್ನನ್ನು ಕೇಳದೆ, ನಿಯಮಬಾಹಿರವಾಗಿ ವರ್ತಿಸಲು ನಿಮಗೆಷ್ಟು ಧೈರ್ಯ?' ಎಂದು ಆತ ಕೂಗಾಡಿದ್ದ ಎಂದುಹೆಸರಾಂತ ಪತ್ರಿಕೆಗೆ ಬರೆದ ಪತ್ರದಲ್ಲಿ ಪತಿ ತಿಳಿಸಿದ್ದ. ಎಂಥ ವಿಚಿತ್ರ ಮನಸ್ಥಿತಿಯಿದು ನೋಡಿ. ಇದರಲ್ಲಿ ನಿಯಮಬಾಹಿರವಾಗಿದ್ದು ಏನಿದೆ?

ಇಳಿಮುಖವಾಗುತ್ತಿರುವ ಜನಸಂಖ್ಯೆ ಜಪಾನಿನಲ್ಲಿ ಕಾರ್ಮಿಕರ ಕೊರತೆ ಉಂಟುಮಾಡಿದೆ.ಇದರಿಂದಾಗಿ ತಮ್ಮಲ್ಲಿ ನೇಮಕಗೊಂಡ ನೌಕರರು ದೀರ್ಘ ಗಂಟೆಗಳ ಕಾಲ ಕೆಲಸ ನಿರ್ವಹಿಸುವಂತೆ ಮಾಲೀಕರು ಅಪೇಕ್ಷಿಸುತ್ತಾರೆ. ಮನೆ ನಿರ್ವಹಣೆ, ಮಕ್ಕಳನ್ನು ಪೋಷಿಸುವುದು ಇಂದಿಗೂ ಮಹಿಳೆಯರ ಜವಾಬ್ದಾರಿಯೇ ಆಗಿರುವ ಜಪಾನೀ ಸಮಾಜದಲ್ಲಿ ಉದ್ಯೋಗ ಸ್ಥಳದಲ್ಲಿ ಹೆಚ್ಚು ಸಮಯ ಕಳೆಯುವುದು ಮಹಿಳೆಯರಿಗೆ ಕಷ್ಟ. ಹೀಗಾಗಿ ಮಕ್ಕಳನ್ನು ಹೊಂದಬೇಕೆಂದರೆ ಕೆಲಸ ಬಿಡುವುದು ಅಥವಾ ಕುಟುಂಬ ಬೆಳೆಸುವುದನ್ನು ತ್ಯಾಗ ಮಾಡಿ ನೌಕರಿ ಉಳಿಸಿಕೊಂಡು ಬಡ್ತಿ ಗಳಿಸಿಕೊಳ್ಳಬೇಕಾಗಿದೆ.

ಪ್ರಯಾಸದಿಂದ ದೊರಕಿದ ಉದ್ಯೋಗಿಗಳು ಮಹಿಳೆಯರಾಗಿದ್ದಾಗ, ಅವರು ಸರದಿಯನ್ನು ಮೀರಿ ಗರ್ಭಿಣಿಯರಾದರೆ, ಕುಟುಂಬಕ್ಕೆ ಪೂರ್ಣ ಸಮಯ ನೀಡಲು ಕೆಲಸ ಬಿಡುವ ಸಾಧ್ಯತೆಯೇ ಹೆಚ್ಚಾಗಿರುವುದರಿಂದ ಮಾಲೀಕರು ಈ ರೀತಿ ನಿಯಂತ್ರಣ ಸಾಧಿಸಲು ಪ್ರಯತ್ನಿಸುತ್ತಾರೆ ಎನ್ನುತ್ತಾರೆ, ಕನಾಕೊ ಅಮಾನೊ ಎಂಬ ಒಬ್ಬ ಸಂಶೋಧನಾರ್ಥಿ. ಕೆಲಸ ಉಳಿಸಿಕೊಳ್ಳಬೇಕು ಎಂದರೆ ಸರದಿಯ ಪ್ರಕಾರವೇ ಗರ್ಭಿಣಿಯಾಗಬೇಕು ಎಂಬುದು ಅವರ ಧೋರಣೆ ಎಂದಾಕೆ ವಿವರಿಸುತ್ತಾರೆ. ಉದ್ಯೋಗಿಗಳಲ್ಲಿ ಇಬ್ಬರು ಮೂವರು ಒಟ್ಟೊಟ್ಟಿಗೆ ಗರ್ಭಿಣಿಯರಾಗಿ ಬಿಟ್ಟರೆ ಕಂಪನಿ ನಡೆಸುವುದು ಕಷ್ಟ. ಹೊಸ ಕೆಲಸದವರು ಸಿಗುವುದೂ ಕಷ್ಟ. ಹೀಗಾಗಿ ತಾಯ್ತನವನ್ನೂ ಉದ್ಯೋಗದಾತನ ಆಣತಿ ಮೇರೆಗೇ ಹೊಂದಬೇಕಾದ ಅನಿವಾರ್ಯತೆ.

ಕಿರಿಯ ವಯಸ್ಸಿನ ಮಹಿಳೆಯರನ್ನು ನೇಮಿಸಿಕೊಳ್ಳುವ ಉದ್ಯೋಗ ವಲಯಗಳಲ್ಲಿ 'ಪ್ರೆಗ್ನೆನ್ಸಿ ರೋಟಾ' ಒಂದು ಮಾಮೂಲಿ ಪದ್ಧತಿಯಾಗಿಬಿಟ್ಟಿದೆ ಎನ್ನುತ್ತಾಳೆ ಜಪಾನಿ ಮಹಿಳೆ ಅಮಾನೊ. 'ಇದು ಅನ್ಯಾಯ ಎಂದು ಕೂಡ ಅನೇಕರಿಗೆ ಅರ್ಥವಾಗುವುದಿಲ್ಲ, ಬದಲಾಗಿ ಹೆರಿಗೆ ರಜೆ ತೆಗೆದುಕೊಳ್ಳುವಾಗ ತಪ್ಪಿತಸ್ಥ ಭಾವನೆ ಅನುಭವಿಸುತ್ತಾರೆ' ಎನ್ನುತ್ತಾರೆ. ಗರ್ಭಿಣಿಯಾಗಲು ಮಹಿಳಾ ಉದ್ಯೋಗಿಗಳು ಅವರಿಗೆ ಬೇಕಾದಾಗ ಮುಂದಾಗುವುದು ಕಾರ್ಮಿಕ ಕೊರತೆ ಸಮಸ್ಯೆಯನ್ನು ಇನ್ನಷ್ಟು ಬಿಗಡಾಯಿಸುತ್ತದೆ ಎನ್ನುವುದು ಉದ್ಯೋಗದಾತರ ವಾದವಾದರೂ ಹೀಗೆ ಸರದಿ ಯಾದಿ ಸೃಷ್ಟಿಸುವ ಮೂಲಕ ಅವರು ಜನಸಂಖ್ಯೆಯನ್ನು ಇನ್ನಷ್ಟು ಕ್ಷೀಣಿಸುವಂತೆ ಮಾಡಿ ತಮ್ಮ ಸಮಸ್ಯೆಯನ್ನು ಉಲ್ಬಣಗೊಳಿಸಿಕೊಳ್ಳುತ್ತಿದ್ದಾರೆ ಎಂದು ಅಮಾನೊ ವಿಶ್ಲೇಷಿಸುತ್ತಾರೆ.

ಸಂತಾನಹೊಂದುವ ಅಪೇಕ್ಷೆ ಹೊಂದಿರುವ ದಂಪತಿಯನ್ನು 'ಪ್ರೆಗ್ನೆನ್ಸಿ ಸರತಿ ಸಾಲಿ'ನಲ್ಲಿ ನಿಲ್ಲಿಸುವುದು ಕಾನೂನು ಬಾಹಿರ ಎಂದು ಪರಿಣತರು ಅಭಿಪ್ರಾಯಪಟ್ಟರೆ ಅದು ಅನಿವಾರ್ಯವಾಗಿದೆ ಎನ್ನುತ್ತಾರೆ, ಟೋಕಿಯೋದ ಶಿಶು ಆರೋಗ್ಯ ಹಾಗೂ ಶಿಕ್ಷಣ ಸಂಶೋಧನಾ ಸಂಸ್ಥೆಯೊಂದರಲ್ಲಿ ಹಿರಿಯ ಅಧಿಕಾರಿಯಾಗಿರುವ ನವೋಲಿ ಸಕಸಾಯ್. ವಿಶೇಷವಾಗಿ ನರ್ಸರಿ ಹಾಗೂ ಆಸ್ಪತ್ರೆಗಳಲ್ಲಿ ಉದ್ಯೋಗಿಗಳ ಕೊರತೆ ಉಂಟಾಗುವುದನ್ನು ತಡೆಗಟ್ಟಲು ಈ ಕ್ರಮ ಅನುಸರಿಸಲಾಗುತ್ತಿದೆ ಎಂದವರು ತಿಳಿಸುತ್ತಾರೆ. ಈ ನಿಯಮ ಲಿಖಿತವಾಗಿರಬಹುದು ಅಥವಾ ಇಲ್ಲದಿರಬಹುದು ಆದರೆ ಕೆಲಸಗಾರರ ಮನಸ್ಸಿನಲ್ಲಿಯಂತೂ ಇರುತ್ತದೆ ಎಂಬುದು ಸಕಾಯ್ ಹೇಳಿಕೆ. ಕೆಲ ಮಹಿಳೆಯರಿಗೆ ಈ ನೀತಿ ಅಪಥ್ಯವೇನೂ ಅಲ್ಲವಾದರೂ ನವ ವಿವಾಹಿತರಾಗಿರಲೀ ಅಥವಾ ಮದುವೆಯಾಗಿ ಒಂದಷ್ಟು ವರ್ಷ ಕಳೆದಿರಲೀ ಯಾರನ್ನಾದರೂ ಗರ್ಭಿಣಿಯರಾಗಲು ಅವಸರಿಸಿ ಒತ್ತಡ ಸೃಷ್ಟಿಸುವ ಪರಿಣಾಮ ಇದರಿಂದ ಉಂಟಾಗುತ್ತಿದೆ.ಹಾಗೆಯೇ ತಾಯ್ತನ ಹೊಂದದಿರುವಂತೆ ನಿರಾಕರಿಸುವುದು ಕೂಡ ಮನಸ್ಸಿನ ಮೇಲೆ ಅಗಾಧ ಒತ್ತಡ ಸೃಷ್ಟಿಸುತ್ತಿದೆ. ಜಿ-7 ರಾಷ್ಟ್ರಗಳ ಪಟ್ಟಿಯಲ್ಲಿ ರಾಜಕೀಯ ಹಾಗೂ ವ್ಯಾಪಾರ-ಉದ್ದಿಮೆಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಅತಿ ಕಡಿಮೆ ಇರುವ ಕೊನೆಯ ಸ್ಥಾನ ಜಪಾನ್‌ಗೆ. ಉದ್ಯೋಗ ಸ್ಥಳದಲ್ಲಿ ಮಹಿಳೆಯರು ಎದುರಿಸಬೇಕಾಗಿರುವ ಅನೇಕ ಸಮಸ್ಯೆಗಳಲ್ಲಿ ಈಗ ಸರದಿಯ ಪ್ರಕಾರ ಗರ್ಭಿಣಿಯರಾಗಬೇಕಾದ ಈ ನಿರ್ಬಂಧವೂ ಸೇರಿಕೊಂಡಿದೆ. ಉದ್ಯೋಗ ವಲಯಗಳಲ್ಲಿ ವರಿಷ್ಠ ಸ್ಥಾನ ಗಳಿಸಿರುವ ಮಹಿಳೆಯರು ಬೆರಳೆಣಿಕೆಯಷ್ಟು ಇರುವುದರಿಂದ ಉದ್ಯೋಗಸ್ಥ ಮಹಿಳೆಯರಿಗೆ ಯಾವ 'ಆದರ್ಶ ಮಾದರಿ'ಯೂ ಇಲ್ಲ. ಮಕ್ಕಳನ್ನು ಪಡೆದ ಮೇಲೆ ನೌಕರಿಯಲ್ಲಿರುವ ಮಹಿಳೆಯರು ತಾರತಮ್ಯಕ್ಕೂ ಒಳಗಾಗುತ್ತಾರೆ. ಇದರಿಂದಾಗಿ ಉದ್ಯೋಗಸ್ಥ ಮಹಿಳೆಯರು ಮಗು ಪಡೆಯುವುದೇ ಅಪರಾಧ ಭಾವನೆ ಅವರಲ್ಲಿ ಮೂಡಿಸಿದಂತಾಗುತ್ತದೆ.

ಹೆರಿಗೆ ರಜೆ ಪೂರೈಸಿ ತನ್ನ ನರ್ಸಿಂಗ್ ವೃತ್ತಿಗೆ ಮರಳಿದಾಗ ಅನೇಕ ಸಂಗತಿಗಳು ನಿರಾಸೆ ಉಂಟುಮಾಡಿದ್ದಾಗಿ ಮಾಯು(ಕಲ್ಪಿತ ಹೆಸರು) ಮಹಿಳೆ ಹೇಳುತ್ತಾರೆ. ತಮ್ಮ ಬಡ್ತಿಗೆ ಸಹಾಯಕವಾಗುವ ವೃತ್ತಿಪರ ತರಬೇತಿಯೊಂದಕ್ಕೆ ತಮ್ಮನ್ನು ಕಳುಹಿಸುವಂತೆ ಮೇಲಧಿಕಾರಿಣಿಗೆ ಮನವಿ ಮಾಡಿಕೊಂಡರೆ, 'ಹೆರಿಗೆ ರಜೆ ತೆಗೆದುಕೊಂಡು ಕಡಿಮೆ ಗಂಟೆಗಳು ಕೆಲಸ ಮಾಡಿದ್ದು ಸಾಲದೇ? ಇನ್ನೂ ಎಷ್ಟು ಉಪಕಾರ ಬಯಸುತ್ತೀರಿ ನೀವು?' ಎಂದು ಬಯ್ಗಳು ತಿನ್ನಬೇಕಾಯಿತು ಎನ್ನುತ್ತಾರೆ. ಕಳೆದ ಐದು ವರ್ಷಗಳಲ್ಲಿ ಮೂವರು ಬಾಸ್‌ಗಳು ನನಗೆ ಇದೇ ಬಗೆಯ ಉತ್ತರ ನೀಡಿದ್ದಾರೆ ಎಂದು ಅಳಲು ತೋಡಿಕೊಳ್ಳುತ್ತಾರೆ. ಇವನ್ನೆಲ್ಲ ನೋಡಿದಾಗ ಇಲ್ಲಿ ಮಾನವೀಯತೆಯೇ ಸತ್ತು ಹೋಗಿದೆಯೆ ಅನ್ನಿಸದಿರದು.

ಜಪಾನೀ ಭಾಷೆಯ ಪದಪುಂಜ 'ಮೆಶಿ ಬವ್‌ಕೌ' ಅರ್ಥವೆಂದರೆ 'ಸೇವೆಗಾಗಿ ಖಾಸಗಿ ಜೀವನವನ್ನು ಬಲಿ ಕೊಡುವುದು' ಎಂದು ಉಲ್ಲೇಖಿಸುತ್ತಾರೆ ಮಾಯು. ಇದನ್ನು ಅತಿಗೆ ಕೊಂಡೊಯ್ದ ಕಾರ್ಯನಿರ್ವಹಿಸುವಿಕೆ ಅಥವಾ 'ವರ್ಕ್ ಕಲ್ಚರ್' ಸದ್ಯದ ಸನ್ನಿವೇಶದಲ್ಲಿ ವ್ಯಾಪಿಸಿರುವುದು ಈ ಎಲ್ಲಾ ಕೆಡುಕಿಗೂ ಮೂಲವಾಗಿ ತೋರುತ್ತಿದೆ. ಅಲ್ಲಿನ ಮಹಿಳೆಯರು ಹೆಚ್ಚು ಹೆಚ್ಚು ಉದ್ಯೋಗಸ್ಥರಾಗಲು ಬಯಸುತ್ತಿರುವುದು, ಜನಸಂಖ್ಯೆಯಲ್ಲಿ ಕಡಿತ, ಯುವ ಉದ್ಯೋಗಿಗಳ ಸಂಖ್ಯೆಯಲ್ಲಿ ಇಳಿತ, ವೃದ್ಧರ ಸಂಖ್ಯೆಯಯಲ್ಲಿ ಹೆಚ್ಚಳ ಇವು ಕೂಡ ಇಂಥದೊಂದು ಅಮಾನವೀಯ ವರ್ತನೆಗೆ ಕಾರಣವಾಗಿದೆ. ಏನೇ ಅದಲ್ಲದೆ ಸಾಮಾಜಿಕ ವ್ಯವಸ್ಥೆಯೂ ತನ್ನದೇ ಆದ ಕೊಡುಗೆ ನೀಡುತ್ತಿದೆ. ಏನೇ ಆದರೂ ತಾಯ್ತನ ಹೊಂದುವುದಕ್ಕೂ ಕಂಪನಿಯ ಮಾಲೀಕನ ಒಪ್ಪಿಗೆಗೆ ಕಾಯುವುದು ನಿಜಕ್ಕೂ ಹೇಯ. ಅದರಲ್ಲೂ ಮಗು ಪಡೆಯಲು ಸರತಿಗಾಗಿ ಕಾಯುತ್ತಾ, ಸರತಿ ಬಂದಾಗ ಇತರರಿಂದ ಒತ್ತಡಕ್ಕೆ ಒಳಗಾಗುವುದು ಆಧುನಿಕ ಜೀವನದ ಇನ್ನೊಂದು ದುರಂತ ಎನ್ನಬಹುದು.

ಮೋದಿ ಹತ್ಯೆ ವಿಚಾರ ಪ್ರಚಾರದ ಗಿಮಿಕ್ ಹೌದೇ ?

ವಿದ್ಯಮಾನ

ರವಿ ಜಾನೇಕಲ್

editoped@vishwavani.news

ಇತಿಹಾಸ ಪುಸ್ತಕದ ಮೇಲೆ ಕಣ್ಣಾಡಿಸಿದರೆ ಕೆಲವು ಸತ್ಯಗಳು ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ಈ ಜಗತ್ತಿನಲ್ಲಿ ಒಳ್ಳೆಯ ಕಾರ್ಯಗಳಿಂದಲೋ, ಕೆಟ್ಟ ಕಾರ್ಯಗಳಿಂದಲೋ ಜೀವನದಲ್ಲಿ ಎತ್ತರಕ್ಕೆ ಬೆಳೆದವರನ್ನು ಕೆಲವು ದುಷ್ಟಶಕ್ತಿಗಳು ಕೊಂದಿವೆ. ಮನುಕುಲಕ್ಕೆ ಒಳ್ಳೆಯದನ್ನೇ ಬಯಸಿದ ಸತ್ಯನಿಷ್ಠರನ್ನೂ ಜನರು ಬಿಟ್ಟಿಲ್ಲ.

ಜಗತ್ತಿಗೆ ಸತ್ಯದ ಬೆಳಕು ನೀಡಲು ಅವತರಿಸಿದ ಯೇಸು ಕ್ರಿಸ್ತನನ್ನು ಜನರು ಶಿಲುಬೆಗೆ ಏರಿಸಿ, ಜೀವಂತವಾಗಿ ಕೊಂದರು. ಜಾತಿ-ಮತ, ಮೇಲು-ಕೀಳುಗಳಿಲ್ಲದ ಒಂದು ಉತ್ತಮವಾದಂತಹ, ಮಾದರಿ ಸಮಾಜಕ್ಕಾಗಿ ಶ್ರಮಿಸಿದ ಬಸವಣ್ಣನವರ ಅಂತ್ಯವೂ ಹೀಗೆ ಸಹಜವಲ್ಲದ ರೀತಿಯಲ್ಲಿ ಆಯಿತು. ವಿಪರ್ಯಾಸ ನೋಡಿ ಯೇಸು, ಬುದ್ಧ, ಬಸವ ಇವರೆಲ್ಲರೂ ಮರಣ ಹೊಂದಿದ ನಂತರವೇ ದೇವರಾದರು!

ಮಹಾತ್ಮ ಗಾಂಧಿ, ಮಾರ್ಟಿನ್ ಲೂಥರ್ ಕಿಂಗ್, ಅಬ್ರಹಾಂ ಲಿಂಕನ್, ಜಾನ್.ಎಫ್.ಕೆನಡಿ, ಲಾಲ್ ಬಹದ್ದೂರ್ ಶಾಸ್ತ್ರಿ, ಸುಭಾಷ್ ಚಂದ್ರ ಬೋಸ್ ಮುಂತಾದವರೆಲ್ಲ ತಮ್ಮ ಸ್ವಾರ್ಥಕ್ಕಾಗಿ ಯಾವ ಕಾರ್ಯಗಳನ್ನೂ ಮಾಡಲಿಲ್ಲ. ಎಲ್ಲವೂ ತನ್ನ ಜನ, ತನ್ನ ದೇಶಕ್ಕಾಗಿಯೇ ಎಂದು ಹಗಲಿರುಳು ಹೋರಾಡಿದರು. ಇಂಥವರನ್ನೂ ಜನರು ಕೊಂದರು.

ಆ ಮಹಾತ್ಮರು ಬದುಕಿದ್ದಾಗ ಅವರ ಕಾರ್ಯಗಳು, ಅವಿರತ ಶ್ರಮಗಳೆಲ್ಲವೂ ನಮ್ಮ ಏಳ್ಗೆಗಾಗಿಯೇ ಎಂಬುದು ಜನರಿಗೆ ತಿಳಿಯಲಲ್ಲ. ಅವರು ಹೋದ ನಂತರವೇ ಅವರ ಮಹೋನ್ನತ ಕಾರ್ಯಗಳ ಬಗ್ಗೆ ಅರಿವಾಗಿ ದೇವರಂತೆ ಪೂಜಿಸುತ್ತಿರುವುದು ವಿಪರ್ಯಾಸ. ಒಟ್ಟಿನಲ್ಲಿ ಹೇಳಬೇಕೆಂದರೆ, ಬದುಕಿದ್ದಾಗ ಮಹಾತ್ಮರ ಮಹತ್ವ ಅರಿಯದೇ, ದುಷ್ಟಶಕ್ತಿಗಳಿಂದ ಅಥವಾ ಭಯೋತ್ಪಾದಕ ಸಂಘಟನೆಗಳಿಂದ ಹತ್ಯೆಯಾದ ನಂತರವೇ ಅವರ ಕಾರ್ಯದ ಕುರಿತು ಅರಿವಾಗುತ್ತದೆ.

ಹಿಂದಿನಿಂದ ನಡೆದು ಬಂದ ಹತ್ಯೆಗಳ ಮುಂದುವರಿದ ಭಾಗವಾಗಿ ಈಗ ನರೇಂದ್ರ ಮೋದಿಯವರ ಹತ್ಯೆ ಸಂಚಿನವರೆಗೆ ಬಂದು ನಿಂತಿದೆ! ಮೊನ್ನೆಯಷ್ಟೇ ಪುಣೆ ಪೊಲೀಸರು ಮಾಜಿ ಪ್ರಧಾನಿ ರಾಜೀವ್ ಗಾಂಧಿ ಹತ್ಯೆ ಮಾದರಿಯಲ್ಲಿ ಮಾವೋವಾದಿಗಳು ಪ್ರಧಾನಿ ನರೇಂದ್ರ ಮೋದಿಯವರನ್ನು ಹತ್ಯೆ ಮಾಡಲು ಸಂಚು ರೂಪಿಸಿದ್ದಾರೆ ಎಂದು ನ್ಯಾಯಾಲಯಕ್ಕೆ ಹೇಳಿಕೆ ನೀಡಿದ್ದರು.

ಭಯೋತ್ಪಾದಕರಿಗೆ, ಮಾವೋವಾದಿಗಳಿಗೆ, ದೇಶದೊಳಗಿನ ಹಲವು ಗೋಮುಖ ವ್ಯಾಘ್ರರಿಗೆ ಮೋದಿಯೆಂದರೆ ಯಾಕಿಷ್ಟು ದ್ವೇಷ? ಮೋದಿಯವರೇನು ಹಗರಣಗಳನ್ನು ಮಾಡಿ ಸಾವಿರಾರು ಕೋಟಿ ಅಕ್ರಮ ಆಸ್ತಿ ಮಾಡಿಕೊಂಡಿದ್ದಾರೆಯೇ? ಮೋದಿಯವರ ಕಾರ್ಯಗಳು, ಹಗಲು-ರಾತ್ರಿ ಅರಿಯದ ಅವರ ಸುತ್ತಾಟಗಳು, ವೈಯಕ್ತಿಕ ಬದುಕಿನ ತ್ಯಾಗ, ಇವೆಲ್ಲ ಯಾರಿಗಾಗಿ ಎಂದು ಈಗಲೂ ದೇಶದ ಜನರು ಅರಿತುಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಅವರು ಅಧಿಕಾರ, ಹಣ ಅಕ್ರಮ ಆಸ್ತಿಗಾಗಿ ರಾಜಕೀಯ ಮಾಡಿದ್ದಿದ್ದರೆ, ನೋಟು ನಿಷೇಧ, ಜಿಎಸ್‌ಟಿ ಯಂಥ ಕಠಿಣ ಯೋಜನೆಗಳಿಗೆ ಕೈಹಾಕುತ್ತಿರಲಿಲ್ಲ.

ನರೇಂದ್ರ ಮೋದಿಯವರ ವಿಷಯಕ್ಕೆ ಬಂದರೆ, ದೇಶದ ಅಷ್ಟು ಪಕ್ಷಗಳೂ ಪಕ್ಷಭೇದ ಮರೆತು ಒಂದಾಗಿಬಿಡುತ್ತವೆ! ಎಲ್ಲರೂ ಮೋದಿಯನ್ನು ವಿರೋಧಿಸಿ ದಿನಕ್ಕೊಂದು ಹೇಳಿಕೆ ಕೊಡುತ್ತಿದ್ದಾರೆ. ಮುಂದಿನ ಲೋಕಸಭೆ ಚುನಾವಣೆಯಲ್ಲಿ ಏಕಾಂಗಿಯಾಗಿ ಯಾವ ಪಕ್ಷಕ್ಕೂ ಮೋದಿಯನ್ನು ಸೋಲಿಸುವ ತಾಕತ್ತು ಇಲ್ಲವೆಂದು ಅರಿತಿರುವ ಇವರು, ದೇಶದಲ್ಲಿ ನಾಯಿಕೊಡೆಗಳಂತೆ ಎದ್ದಿರುವ ಎಲ್ಲ ಪಕ್ಷಗಳ ಒಂದು ಕೂಟ ರಚಿಸಿದ್ದಾರೆ.

ಮುಂದಿನ ಲೋಕಸಭಾ ಚುನಾವಣೆಯಲ್ಲಿ ಮೋದಿಯವರನ್ನು ಸೋಲಿಸಲು ಪಣತೊಟ್ಟಿರುವ 'ಮಹಾಘಟಬಂಧ'ರು ಅದಕ್ಕಾಗಿ ಪಾಕಿಸ್ತಾನದವರ ಸಹಾಯ ಪಡೆಯಲೂ ಸಿದ್ಧ, ಚೀನಾದ ಸಹಾಯ ಪಡೆಯಲೂ ಸಿದ್ಧ!! ಒಟ್ಟಿನಲ್ಲಿ ಯಾವ ದಾರಿ ಹಿಡಿದಾದರೂ ಸರಿಯೇ. ಇದುವರೆಗೆ ಓಣಿನಾಯಿಗಳಂತೆ ಪರಸ್ಪರ ಕಚ್ಚಾಡಿಕೊಳ್ಳುತ್ತಿದ್ದವರೆಲ್ಲ ಮೋದಿಯ ವಿರುದ್ಧ ತೊಡೆತಟ್ಟಿದ್ದಾರೆ!

ಮೋದಿಯಿಂದ ಆತಂಕಕ್ಕೆ ಒಳಗಾದವರು ಇವರು ಮಾತ್ರವಷ್ಟೇ ಅಲ್ಲ, ಪಾಕಿಸ್ತಾನದ ಭಯೋತ್ಪಾದಕರು, ದೇಶದೊಳಗಿನ ಮಾವೋವಾದಿಗಳು, ಧಾರ್ಮಿಕ ಮುಖಂಡರು ಕೂಡ ಆತಂಕದಲ್ಲಿದ್ದಾರೆ. ಅವರಿಗೆಲ್ಲ ಅದುವರೆಗೂ ವಿವಿಧ ಮೂಲಗಳಿಂದ ಬೇಕಾದಷ್ಟು ಹಣ ಹರಿದು ಬರುತ್ತಿತ್ತು. ಈ ಹಣದ ಮೂಲ ನರೇಂದ್ರ ಮೋದಿಯವರು ಪ್ರಧಾನಿಯಾದ ನಂತರ ಅವರ ಕಠಿಣ ನಿರ್ಧಾರಗಳಿಂದ ಹಣದ ಒಳ ಹರಿವು ಬಂದ್ ಆಗಿದೆ. ಹೀಗಾಗಿ ಎಲ್ಲಾ ದುಷ್ಟರ ಕಣ್ಣು ನರೇಂದ್ರಮೋದಿಯವರ ಮೇಲೆ ನೆಟ್ಟಿದೆ.

ತಮ್ಮ ಹತ್ಯೆಯ ಬಗ್ಗೆ ನರೇಂದ್ರ ಮೋದಿಯವರಿಗೆ ನೋಟು ಅಮಾನ್ಯೀಕರಣದಂಥ ನಿರ್ಧಾರ ತೆಗೆದುಕೊಂಡಾಗಲೇ ತಿಳಿದಿತ್ತು. ಅದಕ್ಕಾಗಿಯೇ ನೋಟು ರದ್ದಾದ ಎರಡೇ ದಿನದಲ್ಲಿ ಮೋದಿಯವರು- 'ಕೆಲವು ಶಕ್ತಿಗಳು ನನ್ನ ವಿರುದ್ಧ ಎದ್ದು ನಿಂತಿವೆ. ಅವು ನನ್ನನ್ನು ಬಿಡಲಿಕ್ಕಿಲ್ಲ. 70 ವರ್ಷ ಅವರು ಲೂಟಿ ಮಾಡಿದ್ದಕ್ಕೆ ಈಗ ಸಂಕಷ್ಟ ಎದುರಾಗಿದೆ. ಅವರು ನನ್ನನ್ನು ಸಜೀವ ದಹನ ಮಾಡಿದರೂ ಮಾಡಬಹುದು. ನಾನಂತೂ ಎಲ್ಲದಕ್ಕೂ ಸಿದ್ಧನಿದ್ದೇನೆ' ಎಂದಿದ್ದರು.

ಅವರ ಹೇಳಿಕೆಗೆ ಇಂಬು ಕೊಡುವಂತೆ ಕಳೆದ ಲೋಕಸಭಾ ಚುನಾವಣಾ ಪ್ರಚಾರದ ಸಂದರ್ಭದ ಬಿಹಾರದ ಪಟನಾದಲ್ಲಿ ಪ್ರಚಾರ ಸಭೆಯಲ್ಲಿ ಪಾಲ್ಗೊಳ್ಳಬೇಕಿದ್ದ ಕೆಲವೇ ಗಂಟೆಗಳ ಮೊದಲು ಅದೇ ಸ್ಥಳದ ಆಸು ಪಾಸು ಸರಣಿ ಸ್ಫೋಟ ಸಂಭವಿಸಿದ್ದವು. ಅದರ ಪ್ರಮುಖ ಸಂಚುಕೋರರಾದ ಹೈದರ್ ಅಲಿ ಯಾನೆ ಬ್ಲ್ಯಾಕ್ ಬ್ಯೂಟಿ ಸೇರಿದಂತೆ ನಾಲ್ವರನ್ನು ಇತ್ತೀಚೆಗೆ ರಾಷ್ಟ್ರೀಯ ತನಿಖಾ ದಳ ಬಂಧಿಸಿತ್ತು. ಅವರ ಬಾಯ್ಬಿಡಿಸಿದಾಗ ಆಘಾತಕಾರಿ ಅಂಶವೊಂದು ಹೊರಬಿತ್ತು. ನಿಯೋಜಿತ ಪ್ರಧಾನಮಂತ್ರಿ ನರೇಂದ್ರ ಮೋದಿಯವರನ್ನು ಹತ್ಯೆ ಮಾಡುವುದಕ್ಕಾಗಿ ಕಾಶ್ಮೀರ ಕಣಿವೆಯಲ್ಲಿರುವ ಎಲ್ಲ ಉಗ್ರ ಸಂಘಟನೆಗಳು ಒಂದಾಗಿರುವ ಮಾಹಿತಿ ಬಾಯಿಬಿಟ್ಟಿದ್ದ. ಬಂಧಿತ ಉಗ್ರ ಅಲಿ, ಇಂಡಿಯನ್ ಮುಜಾಹಿದ್ದೀನ್ ಸಂಘಟನೆಯ ರಾಂಚಿ ಘಟಕದ ಮುಖ್ಯಸ್ಥ. ಪಾಟ್ನಾ, ಬುದ್ಧಗಯಾ, ಹೈದರಾಬಾದ್ ಸರಣಿ ಸ್ಫೋಟದಲ್ಲೂ ಪ್ರಮುಖ ಪಾತ್ರ ವಹಿಸಿದ್ದ.

ಕಳೆದ ವರ್ಷ ಅಕ್ಟೋಬರ್ ತಿಂಗಳಲ್ಲಿ ಪಾಟ್ನಾದಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಮೋದಿ ಹತ್ಯೆ ಸಂಚು ವಿಫಲವಾದ ಹಿನ್ನೆಲೆಯಲ್ಲಿ ಪಾಕಿಸ್ತಾನದ ಐಎಸ್‌ಐ ಮುಖ್ಯಸ್ಥರು ಬಹಳ ಅಸಮಾಧಾನಗೊಂಡಿದ್ದರಂತೆ. ಕೆಲವು ದಿನಗಳ ಹಿಂದೆ ಮಧ್ಯಪ್ರದೇಶದ ಕೋರ್ಟ್ ನಲ್ಲಿ ವಿಚಾರಣೆ ನಡೆಯುತ್ತಿದ್ದಾಗ ಕೆಲವು ಸಿಮಿ ಕಾರ್ಯಕರ್ತರು, ನರೇಂದ್ರ ಮೋದಿ ಹತ್ಯೆ ಮಾಡಲು ಅವಕಾಶಕ್ಕಾಗಿ ಕಾಯುತ್ತಿದ್ದೇವೆ ಎಂದು ಬಹಿರಂಗವಾಗಿ ಘೋಷಿಸಿದ್ದರು. ಮೋದಿ ನಾಯಕತ್ವದ ಬಗ್ಗೆ ಆತಂಕಕ್ಕೆ ಒಳಗಾಗಿರುವ ಉಗ್ರ ಸಂಘಟನೆಗಳು ತಮ್ಮೊಳಗಿನ ಸೈದ್ಧಾಂತಿಕ ಭಿನ್ನಾಭಿಪ್ರಾಯ ಮರೆತು 'ಟಾರ್ಗೆಟ್ ನಮೋ' ಮಂತ್ರ ಜಪಿಸತೊಡಗಿದ್ದಾರೆ. ದೇಶದೊಳಗೂ ಎಲ್ಲ ರಾಜಕೀಯ ಪಕ್ಷಗಳು ಮೋದಿ ವಿರುದ್ಧ ತೊಡೆ ತಟ್ಟಿದ್ದಾರೆ.

ಹಣ ಮತ್ತು ಅಧಿಕಾರಕ್ಕಾಗಿ ಎಂಥ ನೀಚ ಕಾರ್ಯಕ್ಕೂ ಇಳಿಯುವ ನಮ್ಮ ದೇಶದ ರಾಜಕಾರಣ ಮತ್ತು ಇಲ್ಲಿನ ಇಲ್ಲಿನ ರಾಜಕಾರಣಿಗಳನ್ನು ಎಸಗಿರುವ ಹಲವು ಹಗರಣ ಕೊಲೆಯಂಥ ಪ್ರಕರಣಗಳು ಇತಿಹಾಸದಲ್ಲಿ ದಾಖಲಾಗಿವೆ.

ನರೇಂದ್ರ ಮೋದಿಯವರು ಜನರ ತೆರಿಗೆಯ ಹಣವನ್ನು ತಾನು ತಿನ್ನುವುದಿಲ್ಲ, ಲೂಟಿ ಹೊಡೆಯುವುದಕ್ಕಾಗೇ ರಾಜಕೀಯಕ್ಕೆ ಸಮಾಜಸೇವೆಯ ಮುಖವಾಡ ಬರುವ ಭ್ರಷ್ಟರಿಗೂ ತಿನ್ನಲು ಬಿಡುವುದಿಲ್ಲ ಎಂಬ ಶಪಥ ತೊಟ್ಟಿದ್ದಾರೆ. ಅದರಂತೆ ನಡೆದುಕೊಳ್ಳುತ್ತಿದ್ದಾರೆ. ಹೀಗಾಗಿ ಭ್ರಷ್ಟರಿಗೆ ಮೋದಿ ಅಧಿಕಾರದಲ್ಲಿರುವಷ್ಟು ದಿನ ಇವರ ಬಾಯಿಗೆ ಮಣ್ಣೇ ಗತಿ ಎಂಬುದು ಖಾತ್ರಿಯಾಗಿದೆ. ಈಗ ಮೋದಿ ಹತ್ಯೆಯ ಸಂಚು ಕೇಳಿ ಒಳಗೊಳಗೆ ಸಂತೋಷಪಟ್ಟವರೆಷ್ಟೋ!

ಮೋದಿ ಹತ್ಯೆಯ ಸಂಚು ಕೇವಲ ಪ್ರಚಾರಕ್ಕೋಸ್ಕರ ಮಾಡಿದ ಗಿಮಿಕ್ ಎಂದು ವಿರೋಧ ಪಕ್ಷಗಳು ಹೇಳಿವೆ. ದೇಶದ ಪ್ರಧಾನಮಂತ್ರಿಯ ಹತ್ಯೆ ಸೂಚನೆ ಮೊದಲಿನಿಂದಲೂ ಇತ್ತು. ಮೋದಿ ಪ್ರಧಾನಿಯಾದಾಗಲೇ ಅವರ ಭದ್ರತೆ ವಿಚಾರ ದೊಡ್ಡ ತಲೆ ನೋವಾಗಿತ್ತು. ಈಗಂತೂ ಅವರ ಜನಪ್ರಿಯತೆ ಇಷ್ಟೊಂದು ಹೆಚ್ಚಿದ ಮೇಲೆ ಅದು ನಿಜಕ್ಕೂ ದೊಡ್ಡ ಸವಾಲೇ ಆಗಿದೆ. ಹೀಗಿರುವಾಗ ಇಂಥ ಗಂಭೀರ ವಿಚಾರವನ್ನು ಗಿಮಿಕ್ ಆಗಿ ಬಳಸಿಕೊಳ್ಳುವ ಅಗತ್ಯ ಬಿಜೆಪಿಗಿಲ್ಲ. ಕಾರಣ ಬಿಜೆಪಿ 22 ರಾಜ್ಯಗಳನ್ನು ಗೆದ್ದು ಬೀಗುತ್ತಿದೆ. ಪ್ರಧಾನಿಯ ಹತ್ಯೆಯ ವಿಷಯ ಇಟ್ಟುಕೊಂಡು ಮುಂಬರುವ ಚುನಾವಣೆ ಗೆಲ್ಲುವುದಕ್ಕಿಂತ ಮೋದಿಯನ್ನು ಜೀವಂತ ಉಳಿಸಿಕೊಳ್ಳುವುದೇ ಅದಕ್ಕೆ ಪ್ರಮುಖ ವಿಷಯವಾಗಿದೆ.

ಭಾರತದ ಭದ್ರತಾ ಪಡೆಗಳು ಮೊದಲಿಗಿಂತಲೂ ಹತ್ತುಪಟ್ಟು ಬಲಿಷ್ಠವಾಗಿವೆ. ಇಂಥ ಸಂಚನ್ನು ವಿಫಲಗೊಳಿಸುವ ಸಾಮರ್ಥ್ಯ ನಮ್ಮ ದೇಶದ ಭದ್ರತಾ ಪಡೆಗಳಿಗಿದೆ. ಇದು ಪ್ರಧಾನಿ ನರೇಂದ್ರ ಮೋದಿಯವರ ಹತ್ಯೆಗೆ ಸಂಬಂಧಿಸಿದ್ದಷ್ಟೇ ಅಲ್ಲ, ದೇಶದ ಭದ್ರತೆಗೆ ಸವಾಲು ಹಾಕಿದಂತೆ. ಭಾರತೀಯ ಭದ್ರತಾ ಪಡೆಗಳು ಎಲ್ಲ ದುಷ್ಟರನ್ನು ಸದೆಬಡೆಯಲಿ.

ನೂರು ಜನಕ್ಕೆ ಊಟ ಕೊಡಲಾಗದಿದ್ದರೆ ಮೂರು ಜನಕ್ಕೆ ಕೊಡಿ!

ಕ್ಷಣ ಹೊತ್ತು ಆಣಿ ಮುತ್ತು

ಎಸ್.ಷಡಕ್ಷರಿ

editoped@vishwavani.news

ಇಲ್ಲೊಂದು ಹೃದಯಸ್ಪರ್ಶಿ ಘಟನೆಯಿದೆ. ಯಶಸ್ವೀ ಉದ್ಯಮಿಯೊಬ್ಬರು ಯಾವುದೋ ಒಂದು ಸಂದರ್ಭದಲ್ಲಿ ಹೇಳಿದ ಘಟನೆ.

ಅವರಿಗೆ ಹದಿನೈದು ವರ್ಷ ವಯಸ್ಸಾಗಿದ್ದಾಗ ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರಂತೆ. ಅಲ್ಲಿ ಉದ್ಯೋಗದಲ್ಲಿದ್ದ ಅವರ ತಂದೆಯವರು ಪ್ರತಿವರ್ಷ ತಾತನವರ ತಿಥಿಯನ್ನು ಶಾಸ್ತ್ರಾನುಸಾರವಾಗಿ ಮಾಡುತ್ತಿದ್ದರು. ಅಂದು ಅವರ ಆಫೀಸಿನಲ್ಲೇ ಕೆಲಸ ಮಾಡುತ್ತಿದ್ದ ಮೂವರು ಬ್ರಾಹ್ಮಣರನ್ನು ಕರೆದು ಅವರಿಗೆ ಭೋಜನವನ್ನು ನೀಡುತ್ತಿದ್ದರು. ಇದು ಅನೇಕ ವರ್ಷಗಳಿಂದ ಅವರ ಮನೆಯಲ್ಲಿ ನಡೆಯುತ್ತಿದ್ದ ಸಂಪ್ರದಾಯ.

ಅಂತಹದ್ದೇ ಒಂದು ದಿನ ತಂದೆಯವರು ಮಗನನ್ನು ಕರೆದು ನನ್ನ ತಂದೆಯವರು ಸಾಯುವ ಮುಂಚೆ ಅವರ ತಿಥಿಯ ದಿನ ಕನಿಷ್ಠ ಮೂವರಿಗೆ ಊಟ ಹಾಕಿಸಬೇಕೆಂದು ತಿಳಿಸಿದ್ದರು. ಅದನ್ನು ಹತ್ತಾರು ವರ್ಷಗಳಿಂದ ಪಾಲಿಸಿಕೊಂಡು ಬರುತ್ತಿದ್ದೇನೆ. ಆದರೆ ಪ್ರತಿವರ್ಷ ಬರುವ ಆ ಮೂವರು ಇಂದು ಊಟಕ್ಕೆ ಬರಲಾಗುವುದಿಲ್ಲವೆಂದು ಈಗಷ್ಟೆ ಸುದ್ದಿ ಕಳುಹಿಸಿದ್ದಾರೆ. ಈಗ ಹೊಸಬರನ್ನು ಹುಡುಕಿಕೊಂಡು ಬರುವುದು ಕಷ್ಟವಾಗುತ್ತದೆ. ನಾನು ಮೂವರಿಗಾಗುವಷ್ಟು ಊಟವನ್ನು ಡಬ್ಬಿಗೆ ಹಾಕಿ ಕೊಡುತ್ತೇನೆ. ನೀನದನ್ನು ತೆಗೆದುಕೊಂಡು ಗಂಗಾನದಿಯ ತೀರಕ್ಕೆ ಹೋಗು. ಅಲ್ಲಿ ಯಾರಾದರೂ ಮೂವರಿಗೆ ಊಟವನ್ನು ಬಡಿಸಿ ಬಾ ಎಂದು ಹೇಳಿ ಕಳುಹಿಸಿದರು.

ಆದರೆ ಮಗ ಗಂಗಾನದೀತೀರಕ್ಕೆ ಹೋದಾಗ ಅಲ್ಲಿ ಒಬ್ಬಿಬ್ಬರಲ್ಲ, ನೂರಾರು ಜನ ಕುಳಿತಿದ್ದರು. ಎಲ್ಲರೂ ಹಸಿದವರಂತೆ ಕಾಣುತ್ತಿದ್ದರು. ಕೆಲವರಂತೂ 'ನಾವು ಊಟ ಮಾಡಿ ಮೂರು-ನಾಲ್ಕು ದಿನಗಳಾದವು. ನಮಗೇ ಊಟ ಬಡಿಸಿ' ಎಂದು ಗೋಗರೆದರು. ಅವರ ಬಳಿಯಿದ್ದದ್ದು ಮೂವರಿಗಾಗುವಷ್ಟು ಊಟ. ಅದನ್ನು ಅಷ್ಟೊಂದು ಜನರಿಗೆ ಹೇಗೆ ಬಡಿಸುವುದೆಂದು ಅವರಿಗೆ ಗೊತ್ತಾಗಲಿಲ್ಲ. ಅಷ್ಟೂ ಜನರಿಗೆ ಊಟ ಬಡಿಸುವಷ್ಟು ಭೋಜನ ಸಾಮಗ್ರಿ ಅವರ ಡಬ್ಬಿಗಳಲ್ಲಿರಲಿಲ್ಲ. ಊಟ ಬೇಡುವವರ ದುಃಸ್ಥಿತಿಯನ್ನೂ, ತಮ್ಮ ಅಸಹಾಯಕತೆಯನ್ನೂ ನೋಡಿ ತುಂಬ ದುಃಖವಾಯಿತು. ಅಲ್ಲಿ ಅಷ್ಟೊಂದು ಜನ ಹಸಿವಿನಿಂದ ಕುಳಿತಿರುವಾಗ ಮೂವರಿಗೆ ಮಾತ್ರ ಊಟ ಬಡಿಸುವುದು, ಆನಂತರ ಮನೆಗೆ ಹೋಗಿ, ತಾವು ಚೆನ್ನಾಗಿ ಊಟ ಮಾಡುವುದು ಏಕೋ ಅವರಿಗೆ ಸರಿ ತೋರಲಿಲ್ಲ. ಅವರು ಅಲ್ಲಿಯೇ ಸುಮ್ಮನೆ ಕುಳಿತುಬಿಟ್ಟರು. ಬಹಳ ಹೊತ್ತಿನ ನಂತರ ಅವರ ತಂದೆಯವರೇ ಅವರನ್ನು ಹುಡುಕಿಕೊಂಡು ಅಲ್ಲಿಗೆ ಬಂದರು. ಏನಾಯಿತೆಂದು ಕೇಳಿದರು. ಅವರು ತಂದೆಯವರಿಗೆ ಸಮಸ್ಯೆಯನ್ನು ಹೇಳಿಕೊಂಡು ಅತ್ತುಬಿಟ್ಟರು. ತಂದೆಯವರು ಅಳಬೇಡವೆಂದು ಸಮಾಧಾನ ಪಡಿಸಿದರು. ಅಲ್ಲಿದ್ದ ನೂರಾರು ಜನರ ಪೈಕಿ ಮೂವರು ವಯೋವೃದ್ಧರನ್ನು ಆಯ್ದು, ಅವರನ್ನು ಒಂದು ಮೂಲೆಗೆ ಕರೆದುಕೊಂಡು ಹೋಗಿ ಕೂರಿಸಿದರು. ಅವರಿಗೆ ಊಟವನ್ನು ಬಡಿಸಿದರು. ಆ ಮೂವರೂ ಸಂತೃಪ್ತಿಯಿಂದ ಉಂಡರು. ತಂದೆ-ಮಕ್ಕಳನ್ನು ಆಶೀರ್ವದಿಸಿದರು. ಇದೆಲ್ಲವನ್ನು ನೋಡುತ್ತ ನಿಂತಿದ್ದ ಮಗನಿಗೆ ತಂದೆಯವರು ಇಲ್ಲಿರುವ ನೂರಾರು ಜನಕ್ಕೆ ಊಟ ಕೊಡಲಾಗದಿದ್ದರೆ, ಮೂವರಿಗಾದರೂ ಕೊಡಬಹುದಲ್ಲವೇ? ಪ್ರಾಮಾಣಿಕ ಪ್ರಯತ್ನವಿದ್ದರೆ, ಅದು ಎಷ್ಟೇ ಚಿಕ್ಕದಾಗಿರಲಿ, ಕೈಗೆತ್ತಿಕೊಂಡ ಕಾರ್ಯದ ಫಲ ಸಿಕ್ಕೇ ಸಿಗುತ್ತದೆ! ಎಂದು ವಿವರಿಸಿದರು.

ಈ ಪ್ರಸಂಗ ನಡೆದು ದಶಕಗಳೇ ಕಳೆದಿದ್ದರೂ, ಆ ಉದ್ಯಮಿ ಅದನ್ನೂ, ತಂದೆಯವರ ಮಾತು ಸಮಸ್ಯೆಗಳ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನವಿದ್ದರೆ, ಅದು ಎಷ್ಟೇ ಚಿಕ್ಕದಿರಲಿ, ಫಲ ಸಿಕ್ಕೇ ಸಿಗುತ್ತದೆ ಎಂಬುದನ್ನೂ ಮರೆತಿಲ್ಲ.

ನಾವು ನೀವು ಇರುವ ಜಗತ್ತಿನಲ್ಲಿ ಸಮಸ್ಯೆಗಳ ಕೊರತೆ ಇಲ್ಲ. ಆದರೆ ಎಲ್ಲಾ ಸಮಸ್ಯೆಗಳನ್ನು ಒಮ್ಮೆಲೇ ನಿವಾರಿಸಲಾಗುವುದಿಲ್ಲ. ಸಮಸ್ಯೆಗಳ ಬೃಹದಾಕಾರವನ್ನು ನೋಡಿ ಹೆದರಿ ಸುಮ್ಮನೆ ಕುಳಿತರೂ ಫಲ ಸಿಕ್ಕುವುದಿಲ್ಲ. ನಮಗೆಷ್ಟು ಸಾಧ್ಯವೋ ಅಷ್ಟನ್ನಾದರೂ ನಾವು ಪರಿಹರಿಸಲು ಪ್ರಯತ್ನಿಸಬೇಕಲ್ಲವೇ? ಎಲ್ಲರೂ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಾ ಹೋದರೆ, ಸಮಸ್ಯೆಗಳ ಗಾತ್ರ ಅಷ್ಟರ ಮಟ್ಟಿಗಾದರೂ ಕಿರಿದಾಗುತ್ತಾ ಹೋಗುತ್ತದಲ್ಲವೇ?